# ಬಿಲ್ಲೆಗಾರನು ಆದನು ರಂಗಯ್ಯ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 407.
2. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Prof. S.K. Ramachandra Rao and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
3. **Note:** Singer has followed these lyrics.

ರಾಗ: ಶಂಕರಾಭರಣ ತಾಳ: ಆದಿ

ಬಿಲ್ಲೆಗಾರನು ಆದನು ರಂಗಯ್ಯ ರಂಗ || ಪ ||
ಬಿಲ್ಲೆಗಾರನಾಗಿ ಎನ್ನ ಕಾವಲಾದ
ಬಲ್ಲವರ ಭಾಗ್ಯವೊ ಎಲ್ಲವರಿತ ಸ್ವಾಮಿ || ಅಪ ||

ಸಾಟಿಯಿಲ್ಲದ ಪರಿ ತಲೆಯಲಿ ಕಟ್ಟಿಹ
ನೀಟಾಗಿ ಧರಿಸಿಪ್ಪ ಅಂಗಿಗಳು
ನೋಟಕ್ಕೆ ಆಶ್ಚರ್ಯ ಕಾಲಲಿ ತೊಟ್ಟದ್ದು
ಜಾಡೆ ಮಾಡುತ ಎನ್ನ ಬೆನ್ನಿಲ್ಲಿಂದೆ ನಿಂದನು || 1 ||

ನಡುವಿಲಿ ಸುತ್ತಿಹ ಬಣ್ಣದ ಪಟ್ಟೆಯ
ಎಡದಲಿ ಪೊಳೆವುದು ಬಿಲ್ಲೆ ಒಂದು
ಒಡೆಯ ಎನ್ನಣ್ಣಯ್ಯ ಕರಗಳ ಕಟ್ಟಿಹ
ಬೆಡಗು ಮಾಡುತಲಿ ಬೆನ್ನಟ್ಟಿ ಬಂದನು || 2 ||

ಒಂದೊಂದು ರೂಪದಿ ಒಂದೊಂದು ಭಕುತಗೆ
ಒಂದೊಂದು ಕಾಲದಿ ತೋರುತಲಿ
ಕಂದ ಕೃಷ್ಣ ಎನ್ ತಂದೆ ಪುರಂದರವಿಠಲ
ಇಂದಿಲ್ಲಿ ಬಂದನು ಬಿಲ್ಲೆಗಾರನಾಗಿ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಬಿಲ್ಲೆ** = ಹೆಸರಿನ ಪದಕ, ಕಾಲಾಣೆಯ ನಾಣ್ಯ, ತೆಳ್ಳಗೆ ದುಂಡಾಗಿರುವ ವಸ್ತು, ತೆಳುವಾಗಿರುವ ವಸ್ತು,

**ಬೆಡಗು** = ಸೋಗು, ಒಣ ಆಡಂಬರ

**ಜಾಡಿ** = ಸೂಚನೆ

**Classification:** Keerthane
**Ankita:** purandara vittala
**Location:** NA
**Category:** Krishna Stuti
**Sub-Category:** ranga, Bhagya, kai, Krishna,
**Pravachana:** NA
**Explanation:** NA